**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 1923/2023</u>**

**<u>ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 3</u>**

ಸಾಕ್ಷಿದಾರನ ಹೆಸರು : ಅನಂತಕುಮಾರ

ತಂದೆಯ ಹೆಸರು : ಸಂಜೀವಪ್ಪ

ವಯಸ್ಸು : 36 ವರ್ಷ

ಕೆಲಸ : ಖಾಸಗಿ ಕೆಲಸ

ವಾಸ : ಹಳೆಕೋಟೆ

**<u>ಸಾಕ್ಷಿಗೆ ದಿನಾಂಕಃ 16.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ಮೃತ ದೇವಿರಮ್ಮ ನನಗೆ ಚಿಕ್ಕಮ್ಮನಾಗಬೇಕು. ಸುಮಾರು 3 ವರ್ಷಗಳ ಹಿಂದೆ ನನ್ನ ಚಿಕ್ಕಮ್ಮ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅವರು ಹೇಗೆ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ಅಪಘಾತ ಹೇಗೆ ಆಯಿತು ಯಾರಿಂದ ಆಯಿತು ನನಗೆ ಗೊತ್ತಿಲ್ಲ. ಸಾಕ್ಷಿ ದೂರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿಃ 3 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿಃ 4 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಕ್ಷೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿಃ 5 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಭಾವಚಿತ್ರ ತಮ್ಮನ್ನು ನೋಡಿ

ಗುರುತಿಸಿದ್ದರಿಂದ ಸದರಿ ದಾಖಲಯನ್ನು ನಿಪಿಃ 6 ಎಂದು ಗುರುತಿಸಲಾಯಿತು.

ನಿಪಿಃ 3 ಮತ್ತು 4 ರಲ್ಲಿ ಏನು ಬರೆದಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿರುತ್ತಾರೆ. ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಮಾನ್ಯ ಎಪಿಪಿ ಯವರು ಕೋರಿಕೆಯನ್ನು ಪರಿಗಣಿಸಿ ಪಾಟಿ ಸವಾಲಿಗೆ ಅವಕಾಶ ನೀಡಲಾಯಿತು)**

**<u>ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದಃ</u>**

2. ದಿಃ 19.07.2023 ರಂದು ಮಃ 01.00 ಗಂಟೆಗೆ ದೇವಿರಮ್ಮ ಹಾಗೂ ಆಕೆಯ ಮಗ ಸಣ್ಣಈರಣ್ಣ ಮೋಟಾರ್ ಸೈಕಲ್ ನಂ ಕೆ ಎ 34 ವಿ 7365 ನೇದ್ದರಲ್ಲಿ ಬೆಳಗುರ್ಕಿ ಗ್ರಾಮಕ್ಕೆ ಹೊರಟ್ಟಿದ್ದರು. ಮಃ 02.00 ಗಂಟೆಗೆ ಸಣ್ಣಈರಣ್ಣ ನನಗೆ ಫೋನ್ ಮಾಡಿ ತಾವು ಇಬ್ರಾಹಿಂಪುರ ಗ್ರಾಮದ ದರ್ಗಾದ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದಾಗ ರೋಡ್ ಹಂಪ್ಸ ಹತ್ತಿರ ದೇವಿರಮ್ಮ ಬೈಕ್ ಮೇಲಿದ್ದ ಬಿದ್ದು ಗಾಯಗೊಂಡಿದ್ದು ಆಕೆಯನ್ನು ಸಿರುಗುಪ್ಪ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದೆವೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಕೂಡಲೇ ನಾನು ಹಾಗೂ ನನ್ನ ಸಂಬಂಧಿಕರು ಆಸ್ಪತ್ರೆಗೆ ಹೋಗೀ ನೋಡಿದಾಗ ದೇವಿರಮ್ಮಳಿಗೆ ಮೂಗಿಗೆ, ಗದ್ದಕ್ಕೆ, ಭುಜಕ್ಕೆ ಹಾಗೂ ತಲೆಗೆ ಗಾಯ ಆಗಿತ್ತು ಎಂದರೆ ಸರಿಯಲ್ಲ. ಈರಣ್ಣನಿಗೆ ವಿಚಾರಿಸಿದಾಗ ತಾನು ಮೋಟಾರ್ ಸೈಕಲ್ ನ್ನು ಅಜಾಗರೂಕತೆಯಿಂದ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ರೋಡ್ ಹಂಪ್ಸ ಎಗ್ಗರಿಸಿದ್ದರಿಂದ ಆಯತಪ್ಪಿ ರಸ್ತೆಯ ಮೇಲೆ ತಾನು ಹಾಗೂ ದೇವಿರಮ್ಮ ಬಿದ್ದೆವು ಎಂದು ಹೇಳಿದನು ಎಂದರೆ ಸರಿಯಲ್ಲ. ನಂತರ ದೇವಿರಮ್ಮನ್ನು ಬಳ್ಳಾರಿ ವಿಮ್ಸ

ಆಸ್ಪತ್ರೆಗೆ ಕರೆದಕೊಂಡು ಹೋಗಿದ್ದು ಆಕೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿಃ 1 ರಂತೆ ದೂರು ನೀಡಿದ್ದೆನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನಾನು ತೋರಿಸಿದಂತೆ ಚಾಸಾ 2 ಮತ್ತು 3 ರವರ ಸಮಕ್ಷಮ ಇಬ್ರಾಹಿಂಪುರ ಗ್ರಾಮದ ದರ್ಗಾದ ಹತ್ತಿರ ರಸ್ತೆಯಲ್ಲಿ ನಿಪಿಃ 4 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಆ ಕಾಲಕ್ಕೆ ನಿಪಿಃ 5 ರಂತೆ ನಕ್ಷೆ ತಯಾರಿಸಿ ನಿಪಿಃ 6 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾವು ಹಾಗೂ ಆರೋಪಿತರು ರಾಜೀ ಆದ ಕಾರಣ ಎಲ್ಲಾ ವಿಚಾರ ಸರಿ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ**

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**